

ತಾತ ಆಗ್ಲೇ ಮನೆಗೆ ಬಂದಾದೆ!' ಎಂದವನೇ ಅವನು ಅಲ್ಲಿ ನಿಲ್ಲಲೇ ಇಲ್ಲ.

ಕಜ್ಜಿನಿಂಗಣ್ಣ, 'ಯಾಕೋ ಕಾಣ್ಣಲ್ಲ ಅತ್ತಿಗೆ ಹೊತಾರೆಯೇ ಹೇಳಿ ಕಳಿಸವಳೆ' ಅಂದುಕೊಳ್ಳುತ್ತಿರುವಾಗಲೇ, ವರ್ಷದ ಹಿಂದೆ ತನ್ನ ಅಣ್ಣನ ತಿಂಗಳ ತಿಥಿ ದಿನ ಅವಳ ಮಕ್ಕಳು ಮಾಡಿದ್ದ ರಂಪಾಟ ಅವನ ಕಣ್ಮುಂದೆ ಮತ್ತೆ ಸುಳಿದು ಹೋಯ್ತು. 'ಮತ್ತೆ ಏನಾದ್ರು ಅವಳ ಮಕ್ಕಳು ಗಲಾಟೆ ಮಾಡ್ಕೊಂಡ್ರೋ ಏನೋ ಕಾಣ್ಣಲ್ಲ! ಆ ರಾಜಣ್ಣನ ಆರ್ಭಟ ತಪ್ಪಲಿಲ್ಲ. ಅವಳಿಗೆ ನೆಮ್ಮದಿ ಸಿಗಲಿಲ್ಲ. ನಿತ್ಯ ಅವನು ಮನೆಯಲ್ಲಿ ಏನಾದ್ರು ಒಂದು ತಕರಾರು ತೆಗಿತಾನೇ ಇರ್ತಾನೆ! ಆ ಚಂದ್ರಪ್ಪನೋ, ಹಿರಿಮನುಷ್ಯನಾದ್ರೂ ತನ್ನ ಕೈಯ್ಲಾಗಲ್ಲ, ತಾನು ಕುಂಟ ಅಂತ ಮನೆಯ ಜವಾಬ್ದಾರಿಯನ್ನೇ ತೆಗೆದುಕೊಳ್ಳಲಿಲ್ಲ. ಇನ್ನು ಮಧ್ಯದ ಸಿದ್ದಣ್ಣ, ಆಟಕ್ಕುಂಟು ಲೆಕ್ಕಕ್ಕಿಲ್ಲ; ಒಟ್ಟಾರೆ ಅತ್ತಿಗೆಗೆ ಈ ಮಕ್ಕಳಿಂದ ಆ ಮನೆಯಲ್ಲಿ ಶಾಂತಿಯೇ ಇಲ್ಲವಾಗಿದೆ!' ಎಂದುಕೊಳ್ಳುತ್ತಾ, ಅತ್ತಿಗೆ ಚಿನ್ನವ್ವನ ಮನೆಕಡೆ ಹೆಜ್ಜೆ ಹಾಕಿದ.

ಕಜ್ಜಿನಿಂಗಣ್ಣ ಚಿನ್ನವ್ವನ ಮನೆಬಾಗಿಲಿಗೆ ಬರುತ್ತಿದ್ದಂತೆಯೇ, ನಡುಮನೆಯಲ್ಲಿ ರಾಜಣ್ಣ ನಿಂತು, 'ನಾನು ಈ ಮನೆಯಲ್ಲಿ ಇವರ ಜೊತೆ ಇನ್ನು ಒಂದು ಅರೆಗಳಿಗೆ ಹೊತ್ತು ಕೂಡ ಇರಲ್ಲ. ನನಗೆ ನನ್ನ ಭಾಗ ಕೊಟ್ಟುಬಿಡಿ. ನನ್ನ ದಾರಿಯನ್ನು ನಾನು ನೋಡ್ಕೋತ್ತೀನಿ' ಎಂದು ಏರಿದ ದನಿಯಲ್ಲಿ ಕಿರುಚುತ್ತಿದ್ದದ್ದು ಕಜ್ಜಿನಿಂಗಣ್ಣನ ಕಿವಿ ಮೇಲೆ ಬಿತ್ತು. ಆಗ ಕಜ್ಜಿನಿಂಗಣ್ಣ, 'ಇವರನ್ನು ಮತ್ತೆ ಹೊಂದಾಣಿಕೆ ತ್ಯಾಪೆ ಹಾಕುವುದರಿಂದ ಏನೂ ಪ್ರಯೋಜನವಿಲ್ಲ! ಈ ತ್ಯಾಪೆ ಯಾವತ್ತಿದ್ದರೂ ಮತ್ತೆ ಕಿತ್ಕೊಂಡೇ ಇರ್ತದೆ. ಈ ಮನೆಯಲ್ಲಿ ಅವರವರದ್ದು ಏನಿದೆ ಅದನ್ನು ಹಂಚಿಕೊಟ್ಟು ಬೇರೆ ಬೇರೆ ಕಳಿಸುವುದೇ ಒಳ್ಳೆಯದು!' ಎಂದುಕೊಳ್ಳುತ್ತಲೇ ನಡುಮನೆಗೆ ಬಂದು ಗೋಡೆಗೆ ಒರಗಿ ಕೂತನು.

ಮೊದಲೇ ಬಂದು ಕಾಯುತ್ತಾ ಕೂತಿದ್ದ ಅವನ ಅಣ್ಣ ಎಮ್ಮೆಕಾಳಯ್ಯ ಕಜ್ಜಿನಿಂಗಣ್ಣ ಬಂದುದನ್ನು ನೋಡಿ 'ಎಲ್ಲಿ ನಿಮ್ಮಜ್ಜಿ? ಕೂಗು. ಅವಳ ಕಣ್ಮುಂದೆಯೇ ಅದೇನು ಅಂತ ಮಾತನಾಡುವ' ಎನ್ನುತ್ತಾ ಹಿತ್ತಲಲ್ಲಿದ್ದ ಅತ್ತಿಗೆ ಚಿನ್ನವ್ವನನ್ನು ಒಳಗೆ ಬರಲು ಕೂಗುವಂತೆ ಅಲ್ಲೇ ನಿಂತಿದ್ದ ಮುಕುಂದನಿಗೆ ಕೈಸನ್ನೆ ಮಾಡಿದ.